<u>ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಶಹಬಾದ</u>

**CC No : 2070/2021**

CW : 6 PW : 4

| | | |
|---|---|---|
| ಹೆಸರು | : | ಹುಸೇನ ಪಾಶಾ |
| ತಂದೆಯ ಹೆಸರು | : | ರಸೀದಸಾಬ ಕೊಂಚೂರ |
| ವಯಸ್ಸು | : | 29 ವರ್ಷ |
| ಉದ್ಯೋಗ | : | ಪೊಲೀಸ ಪೇದೆ |
| ಸ್ಥಳ | : | ಚಿತ್ತಾಪೂರ ಪೋಲೀಸ್ ಠಾಣೆ |

**(ದಿನಾಂಕ: 13-01-2023** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು**)**

<u>ಮುಖ್ಯ ವಿಚಾರಣೆ: ಸ.ಸ.ಅ ವಕೀಲರಿಂದ</u>

ನಾನು 2016 ನೇ ಸಾಲಿನಿಂದ ಅಗಸ್ಟ-2022 ರವರೆಗೆ ಶಹಾಬಾದ ಪೋಲೀಸ್ ಠಾಣೆಯಲ್ಲಿ ಪೊಲೀಸ್ ಪೇದೆ ಎಂದು ಕಾರ್ಯ ನಿರ್ವಹಿಸಿದ್ದೇನೆ. ಈ ಪ್ರಕರಣದಲ್ಲಿ ದಿನಾಂಕ: 06/10/2020 ರಂದು ಮಧ್ಯಾಹ್ನ 04:00 ಗಂಟೆ ಸುಮಾರಿಗೆ ನಾನು, ಚಾಸಾ-7, 4, 5 ಮತ್ತು 1 ರವರು ಠಾಣೆಯಲ್ಲಿ ಇದ್ದಾಗ ಬೆಂಡಿ ಬಜಾರದಲ್ಲಿ ಇರುವ ಸಾಬೀರ ಯಾದಗಿರಿರವಾಲೆ ಇವರ ಕಿರಾಣಿ ಅಂಗಡಿಯಲ್ಲಿ ಅಕ್ರಮವಾಗಿ ಕಳ್ಳಭಟ್ಟಿ ತಯಾರಿಸುವ ನವಸಾಗರ ದ್ರವಣ ಮತ್ತು ಕೊಳೆತ ಬೆಲ್ಲ ಸಂಗ್ರಹಿಸಿ ಮಾರಾಟ ಮಾಡುತ್ತಿದ್ದಾರೆ ಅಂತಾ ಚಾಸಾ-1 ರವರಿಗೆ ಖಚಿತಿ ಬಾತ್ಮಿ ಬಂದ ಮೇರೆಗೆ ಚಾಸಾ-1 ರವರು ಚಾಸಾ-2, 3 ಮತ್ತು ನಮ್ಮನ್ನು ಬರಮಾಡಿಕೊಂಡು ನಮಗೆ ಬಾತ್ಮಿ ವಿಷಯ ತಿಳಿಸಿ ದಾಳಿ ಮಾಡೋಣ ಅಂತಾ ಹೇಳಿ, ನಾವೆಲ್ಲರೂ ಕೂಡಿ ಠಾಣೆಯ ಜೀಪ್ ನಂ. ಕೆ.ಎ-32, ಜಿ-1027 ನೇದ್ದರಲ್ಲಿ ಚಾಲಕ ಎಚ್ ಸಿ-69 ರವರೊಂದಿಗೆ ಠಾಣೆಯಿಂದ 04:30 ಗಂಟೆಗೆ ಹೊರಟು ಬೆಂಡಿ ಬಜಾರ ತರಕಾರಿ ಮಾರ್ಕೆಟಗೆ ಹೋಗಿ ಒಂದು ಅಂಗಡಿ ಮರೆಯಲ್ಲಿ ನಿಂತು ನೋಡಲಾಗಿ ಒಂದು ಅಂಗಡಿಯಲ್ಲಿ ಒಬ್ಬ ವ್ಯಕ್ತಿಯು ನವಸಾಗರ ದ್ರವಣವನ್ನು ಮಾರಾಟ ಮಾಡುವುದನ್ನು ಖಚಿತಪಡಿಸಿಕೊಂಡು 05:00 ಗಂಟೆಗೆ ದಾಳಿ ಮಾಡಿ, ಸದರಿ ವ್ಯಕ್ತಿಯನ್ನು ಹಿಡಿದು ವಿಚಾರಿಸಲಾಗಿ ಆತನು ತನ್ನ ಹೆಸರು ಮಹಮದ್ ಸಾಬೀರ ತಂದೆ ಮಹಮದ್ ನಸೀರುದ್ದೀನಸಾಬ ಯಾದಗಿರಿವಾಲೆ, ಸಾಃ ಬೆಂಡಿ ಬಜಾರ ಶಹಾಬಾದ ಅಂತಾ ಹೇಳಿರುತ್ತಾನೆ. ಆತನ ಕಿರಾಣಿ ಅಂಗಡಿಯನ್ನು ಪರಿಶೀಲಿಸಲಾಗಿ 8 ರಟ್ಟಿನ ಬಾಕ್ಸಗಳಲ್ಲಿ 200 ಗ್ರಾಂ ನ ನವಸಾಗರ ಉಂಡಿಗಳು ಹಾಗೂ ಒಂದು ಪ್ಲಾಸ್ಟಿಕ ಚೀಲದಲ್ಲಿ 20 ಕೆ. ಜಿ ಕೊಳೆತ ಬೆಲ್ಲ ಇದ್ದು ಸದರಿ 8 ಬಾಕ್ಸಗಳಲ್ಲಿ 100 ಉಂಡಿಗಳಂತೆ 800 ನವಸಾಗರ ಉಂಡಿಗಳು ಕಂಡುಬಂದಿರುತ್ತವೆ. ಅವುಗಳ ಬಗ್ಗೆ ವಿಚಾರಿಸಲಾಗಿ ಯಾವುದೇ ಪರವಾಣಿಗೆ ಇಲ್ಲ ಎಂದು ಹೇಳುತ್ತಾನೆ. ನಂತರ ಚಾಸಾ-1 ರವರು ಚಾಸಾ-2 ಮತ್ತು 3 ರವರ ಸಮಕ್ಷಮ ಪಂಚನಾಮೆಯನ್ನು ಜರುಗಿಸಿ 2 ನವಸಾಗರ ಉಂಡಿಗಳು ಹಾಗೂ 500 ಗ್ರಾಂ ಕೊಳೆತ ಬೆಲ್ಲವನ್ನು FSL ಪರೀಕ್ಷೆ ಕುರಿತು ಸ್ಯಾಂಪಲಗಾಗಿ ತೆಗೆದುಕೊಂಡಿರುತ್ತಾರೆ.

**CC No : 2070/2021**
CW : 6 PW : 4

ಪಂಚನಾಮೆಯನ್ನು 05-15 ರಿಂದ 06-15 ರವರೆಗೆ ಜರುಗಿಸಿ, ನಾವೆಲ್ಲರೂ ಪಂಚನಾಮೆ, ಆರೋಪಿ ಹಾಗೂ ಮುದ್ದೆ ಮಾಲಿನೊಂದಿಗೆ ಠಾಣೆಗೆ ಹಾಜರಾಗಿ ಚಾಸಾ-1 ರವರು ಸರ್ಕಾರದ ತರಫಿ ಫಿರ್ಯಾದಿ ಸಲ್ಲಿಸಿರುತ್ತಾರೆ. ಆರೋಪಿಯನ್ನು ನೋಡಿದರೆ ಗುರುತಿಸಬಲ್ಲೆ. ಆರೋಪಿಯು ನ್ಯಾಯಾಲಯದಲ್ಲಿ ಗೈರು ಹಾಜರಿದ್ದು ವಿನಾಯಿತಿ ಅರ್ಜಿ ಸಲ್ಲಿಸಲಾಗಿದೆ. ಸಾಕ್ಷಿಯು ಮುದ್ದೆ ಮಾಲುಗಳನ್ನು ನೋಡುತ್ತಿದ್ದು ಅವುಗಳನ್ನು ಒಟ್ಟಾರೆಯಾಗಿ ಈಗಾಗಲೇ ಮು.ಮಾ.1 ಎಂದು ಗುರುತಿಸಲಾಗಿದೆ. ನಾನು ಈ ಕುರಿತು ಹೇಳಿ ನೀಡಿರುತ್ತೇನೆ.

<u>ಪಾಟೀ ಸವಾಲು: ಆರೋಪಿ ಪರ ಶ್ರೀ ಟಿ. ಎಚ್. ಎಂ. ವಕೀಲರಿಂದ</u>

ಗುನ್ನಾ ಸ್ಥಳವು ಠಾಣೆಯಿಂದ 500 ಮೀಟರ್ ಅಂತರದಲ್ಲಿ ಇರುತ್ತದೆ. ಗುನ್ನಾ ಸ್ಥಳದ ಅಕ್ಕ ಪಕ್ಕ ಸಾಕಷ್ಟು ಅಂಗಡಿಗಳು ಇವೆ ಅಂದರೆ ಸರಿ. ಆರೋಪಿತನ ಅಂಗಡಿಯನ್ನು ಅಂದಾಜು 20 ಅಡಿ ಅಂತರದಿಂದ ನೋಡಿರುತ್ತೇವೆ. ನಾನು ಹಾಗೂ ನಮ್ಮ ಮೇಲಾಧಿಕಾರಿಯೊಂದಿಗೆ ಆರೋಪಿತನ ವಿರುದ್ಧ ರೇಡ ಪಂಚನಾಮೆ ಜರುಗಿಸಿರುವುದಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಾವು ಚಾಸಾ-2 ಮತ್ತು 3 ರವರ ಸಮಕ್ಷಮ ಪಂಚನಾಮೆ ಜರುಗಿಸಿರುವುದಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರಕರಣಕ್ಕೂ ಮುದ್ದೆಮಾಲಿಗೂ ಹಾಗೂ ಆರೋಪಿಗೂ ಯಾವುದೇ ಸಂಬಂಧ ಇಲ್ಲದಿದ್ದರೂ ಸಹ ನಮ್ಮ ಕಛೇರಿ ಅಂಕಿ ಸಂಖ್ಯೆ ತೋರಿಸಲು ಆರೋಪಿತನ ವಿರುದ್ಧ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮು.ಮಾ-1 ಖೊಟ್ಟಿಯಾಗಿ ತೋರಿಸಲಾಗಿದೆ ಎಂದರೆ ಸರಿಯಲ್ಲ.

ಮರುವಿಚಾರಣೆ: ಇರುವುದಿಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)**

ಓ.ಹೇ.ಕೆ. ಸರಿ ಇದೆ.
**-Sd-**
ಸಿವಿಲ್ ಹಾಗೂ ಜೆ.ಎಮ್.ಎಫ್.ಸಿ.
ನ್ಯಾಯಾಧೀಶರು, ಶಹಬಾದ.